## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ ಜಿಲ್ಲೆ, ರಾಮನಗರ

**ಸತ್ರ ಮೊಕದ್ದಮೆ ಸಂಖ್ಯೆ: 26/2020**

**ಪಿರ್ಯಾದುದಾರರು : ಚನ್ನಪಟ್ಟಣ ಪೂರ್ವ ಪೊಲೀಸ್ ಠಾಣೆ**

**ವಿರುದ್ಧ**

**ಆರೋಪಿಯ ಹೆಸರು : ಸೈಯದ್ ಜಬೀರ್**

**ತಂದೆಯ ಹೆಸರು : ಲೇ.ಸೈಯದ್ ಅಬ್ದುಲ್**

**ವಯಸ್ಸು : 28 ವರ್ಷ**

**ವಾಸಸ್ಥಳ : ಮೆಹದಿನಗರ, ಚನ್ನಪಟ್ಟಣ ಟೌನ್**

### ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರನ್ವಯ ಆರೋಪಿಯ ಹೇಳಿಕೆ

**ಪ್ರಶ್ನೆ - 1** : ಈ ಪ್ರಕರಣದಲ್ಲಿ ಅಭಿಯೋಜನೆಯವರು ತಮ್ಮ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿಗಳ ಹೇಳಿಕೆಗಳನ್ನು ಕೇಳಿ ತಿಳಿದುಕೊಂಡಿದ್ದೀರಾ?

**ಉತ್ತರ** :

**ಪ್ರಶ್ನೆ - 2** : ಪ್ರಾಸಾ.1 – ಸಿಮ್ರಾನರವರು ತಮ್ಮ ಸಾಕ್ಷ್ಯದಲ್ಲಿ ತಾ:*21.01.2020* ರಂದು ರಾತ್ರಿ *11* ಗಂಟೆ ಸಮಯದಲ್ಲಿ ನಾನು, ಫರಾದ್ ಹಾಗು ಸುಹೇಲಾ ಖಾನ್ ಡಿಯೋ ದ್ವಿಚಕ್ರ ವಾಹನದಲ್ಲಿ ರಾಮನಗರದಿಂದ ಚನ್ನಪಟ್ಟಣಕ್ಕೆ ಹೋಗುತ್ತಿದ್ದೆವು, ಸದರಿ ವಾಹನವನ್ನು ಸುಹೇಲಾ ಚಲಾಯಿಸುತ್ತಿದ್ದನು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ** :

**ಪ್ರಶ್ನೆ - 3** : ಪ್ರಾಸಾ.*1* ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆಲ್ ಅಮಿನ್ ಶಾಲೆಯ ರಸ್ತೆಯಲ್ಲಿ ಆರೋಪಿ ನಡೆದುಕೊಂಡು ಬರುತ್ತಿದ್ದವನು ನಮ್ಮ ಬೈಕನ್ನು ನಿಲ್ಲಿಸುವಂತೆ ಹೇಳಿದ್ದರಿಂದ ನಾವು ಬೈಕ್ ನಿಲ್ಲಿಸಿದೆವು, ಆರೋಪಿ ತನ್ನ ಬ್ಯಾಗಿನಲ್ಲಿದ್ದ

ಚಾಕುವನ್ನು ತೆಗೆದು ಫರಾದ್‌ನ ಎಡ ಅಂಗೈಗೆ ಹೊಡೆದನು, ಇದರಿಂದ ಫರಾದ್‌ನ ಎಡಗೈ ಹೆಬ್ಬೆರಳು ತುಂಡಾಗಿ ಬಿದ್ದಿತು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ** :

**ಪ್ರಶ್ನೆ - 4** : ಪ್ರಾಸಾ.*1* ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆರೋಪಿ ಚಾಕುವನ್ನು ತೆಗೆದುಕೊಂಡು ಸ್ಥಳದಿಂದ ಹೊರಟು ಹೋದನು, ನಾವು ಸ್ಥಳದಲ್ಲಿ ಬಿದ್ದಿದ್ದ ಫರಾದ್‌ನ ಎಡಗೈ ಹೆಬ್ಬೆರಳನ್ನು ತೆಗೆದುಕೊಂಡು ಫರಾದ್‌ನನ್ನು ಕರೆದುಕೊಂಡು ಚನ್ನಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಹೋದೆವು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ** :

**ಪ್ರಶ್ನೆ - 5** : ಪ್ರಾಸಾ.*1* ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಇಲ್ಲಿ ಆಗುವುದಿಲ್ಲ, ಬೆಂಗಳೂರಿಗೆ ಕರೆದುಕೊಂಡು ಹೋಗಿ ಎಂದು ಹೇಳಿದರು, ಅದರಂತೆ ಫರಾದ್‌ನನ್ನು ಕರೆದುಕೊಂಡು ಬೆಂಗಳೂರಿನ ಆಸ್ಪತ್ರೆಗೆ ಹೋದರು, ಪೊಲೀಸರಿಗೆ ದೂರನ್ನು ನಾನು ಅದೇ ದಿನ ರಾತ್ರಿ ನೀಡಿರುತ್ತೇನೆ, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ** :

**ಪ್ರಶ್ನೆ - 6** : ಪ್ರಾಸಾ.*1* ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಾನು ದೂರು ಕೊಟ್ಟ ನಂತರ ಮರುದಿನ ಮಧ್ಯಾಹ್ನ *1.30* ಗಂಟೆಗೆ ಪೊಲೀಸರು ಘಟನಾ ಸ್ಥಳಕ್ಕೆ ಬಂದಾಗ ನಾನೇ ಸ್ಥಳವನ್ನು ತೋರಿಸಿರುತ್ತೇನೆ, ಆ ಸಮಯದಲ್ಲಿ ಪೊಲೀಸರು ರಕ್ತವಾಗಿದ್ದ ಮಣ್ಣನ್ನು ತೆಗೆದುಕೊಂಡರು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ** :

**ಪ್ರಶ್ನೆ - 7** : ಪ್ರಾಸಾ.*1* ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸ್ಥಳಕ್ಕೆ ಮಹಜರಿಗಾಗಿ ಬಂದಿದ್ದ ಪೊಲೀಸರು ಸ್ಥಳದಲ್ಲಿ ಸಾದ ಮಣ್ಣನ್ನು ತೆಗೆದುಕೊಂಡರು, ಘಟನೆ

ನಡೆದ ಹಿಂದಿನ ದಿನ ಆರೋಪಿ ಮತ್ತು ಫರಾದ್ ನಡುವೆ ಗಾಂಜಾ ಹೊಡೆಯುವ ವಿಚಾರದಲ್ಲಿ ಗಲಾಟೆಯಾಗಿದ್ದು, ಆಗ ಫರಾದ್ ಆರೋಪಿಗೆ ಹೊಡೆದಿದ್ದರಿಂದ ಘಟನೆಯ ದಿನ ಆರೋಪಿ ಫರಾದ್‌ಗೆ ಚಾಕುವಿನಿಂದ ಹೊಡೆದಿರುತ್ತಾನೆ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ** :

**ಪ್ರಶ್ನೆ - 8** : ಪ್ರಾಸಾ.*2* - ಫರಾನ್ ಮೆಹದಿ ತಮ್ಮ ಸಾಕ್ಷ್ಯದಲ್ಲಿ ತಾ:*21.01.2020* ರಂದು ರಾತ್ರಿ *11* ಗಂಟೆ ಸಮಯದಲ್ಲಿ ನಾನು, ಸಿಮ್ರಾನ್ ಹಾಗು ಸುಹೇಲಾ ಖಾನ್ ಡಿಯೋ ದ್ವಿಚಕ್ರ ವಾಹನದಲ್ಲಿ ರಾಮನಗರದಿಂದ ಚನ್ನಪಟ್ಟಣದ ನಮ್ಮ ಮನೆಗೆ ಹೋಗುತ್ತಿದ್ದೆವು, ಸದರಿ ವಾಹನವನ್ನು ಸುಹೇಲಾ ಚಲಾಯಿಸುತ್ತಿದ್ದನು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ** :

**ಪ್ರಶ್ನೆ - 9** : ಪ್ರಾಸಾ.*2* ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆಲ್ ಅಮಿನ್ ಶಾಲೆಯ ರಸ್ತೆಯಲ್ಲಿ ನಾವು ಹೋಗುತ್ತಿದ್ದಾಗ ಎದುರು ಭಾಗದಿಂದ ಆರೋಪಿ ನಡೆದುಕೊಂಡು ಬರುತ್ತಿದ್ದವನು ನಮ್ಮ ಬೈಕನ್ನು ಅಡ್ಡ ಹಾಕಿ ತನ್ನ ಬ್ಯಾಗಿನಲ್ಲಿದ್ದ ಚಾಕುವನ್ನು ತೆಗೆದು ನನ್ನ ಎಡಗೈನ ಹೆಬ್ಬೆರಳಿಗೆ ಹೊಡೆದನು, ಇದರಿಂದ ನನ್ನ ಎಡಗೈನ ಹೆಬ್ಬೆರಳು ತುಂಡಾಗಿ ಕೆಳಗೆ ಬಿದ್ದಿತು, ಆರೋಪಿ ಚಾಕುವನ್ನು ತೆಗೆದುಕೊಂಡು ಸ್ಥಳದಿಂದ ಓಡಿ ಹೋದನು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ** :

**ಪ್ರಶ್ನೆ - 10** : ಪ್ರಾಸಾ.*2* ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನನ್ನೊಂದಿಗೆ ನನ್ನ ಸ್ನೇಹಿತರು ನನ್ನನ್ನು ಚನ್ನಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು, ನಂತರ ನನ್ನನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋದರು, ಘಟನೆಯಲ್ಲಿ ತುಂಡಾಗಿದ್ದ ನನ್ನ ಬೆರಳನ್ನು ಚನ್ನಪಟ್ಟಣ ಆಸ್ಪತ್ರೆಯಲ್ಲಿ ದ್ರಾವಣದಲ್ಲಿ ಹಾಕಿ ಕೊಟ್ಟಿದ್ದರು, ಅದನ್ನು ವಿಕ್ಟೋರಿಯಾ ಆಸ್ಪತ್ರೆಗೆ ತೆಗೆದುಕೊಂಡು ಹೋದಾಗ ಅಲ್ಲಿ ಸದರಿ

ಬೆರಳನ್ನು ನನ್ನ ಕೈಗೆ ಜೋಡಿಸಿ ಹೊಲೆದಿರುತ್ತಾರೆ, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**<u>ಉತ್ತರ</u>** :

**<u>ಪ್ರಶ್ನೆ - 11</u>** **:** ಪ್ರಾಸಾ.*2* ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸದರಿ ಘಟನೆಯ ಹಿಂದಿನ ದಿನ ಆರೋಪಿ ಮತ್ತು ಇತರರು ಗಾಂಜಾ ಹೊಡೆಯುತ್ತಿದ್ದಾಗ ನಾನು ಅವರಿಗೆ ಗಾಂಜಾ ಸೇವಿಸಬೇಡಿ, ಇಲ್ಲಿಂದ ಹೋಗಿ ಎಂದು ಹೇಳಿದಾಗ ಆರೋಪಿಯನ್ನು ಹೊರತು ಪಡಿಸಿ ಇತರರು ಅಲ್ಲಿಂದ ಹೊರಟು ಹೋಗಿದ್ದರು, ಆ ವಿಚಾರದಲ್ಲಿ ನನ್ನ ಮತ್ತು ಆರೋಪಿಯ ನಡುವೆ ಆಗ ಗಲಾಟೆಯಾಗಿತ್ತು, ಅದೇ ಕಾರಣದಿಂದ ಆರೋಪಿ ಮರುದಿನ ನನ್ನ ಬೆರಳಿಗೆ ಚಾಕುವಿನಿಂದ ಹೊಡೆದಿರುತ್ತಾನೆ, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**<u>ಉತ್ತರ</u>** :

**<u>ಪ್ರಶ್ನೆ - 12</u>** **:** ಪ್ರಾಸಾ.*2* ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಾನು ಆಸ್ಪತ್ರೆಯಲ್ಲಿದ್ದಾಗ ಪೊಲೀಸರು ಅಲ್ಲಿ ಬಂದು ಘಟನೆಯ ಬಗ್ಗೆ ನನ್ನನ್ನು ಕೇಳಿ ತಿಳಿದುಕೊಂಡಿದ್ದರು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**<u>ಉತ್ತರ</u>** :

**<u>ಪ್ರಶ್ನೆ - 13</u>** **:** ಪ್ರಾಸಾ.*4* - ಮುಷಾ ಪೀರ್ ರವರು ತಮ್ಮ ಸಾಕ್ಷ್ಯದಲ್ಲಿ ತಾಃ*21.01.2020* ರಂದು ರಾತ್ರಿ *11.30* ಗಂಟೆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಸುಹೇಲಾ ನನಗೆ ಫೋನ್ ಮಾಡಿ ಆರೋಪಿ ಮತ್ತು ಫರಾನ್ ಮೆಹದಿಯ ನಡುವೆ ಜಗಳವಾಗಿ ಆರೋಪಿ ಫರಾನ್ ಮೆಹದಿಯ ಬೆರಳನ್ನು ಕತ್ತರಿಸಿದ್ದಾನೆ ಎಂದು ಹೇಳಿದನು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**<u>ಉತ್ತರ</u>** :

**ಪ್ರಶ್ನೆ - 14** **:** ಪ್ರಾಸಾ.*4* ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ನಾನು ಚನ್ನಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಹೋದೆನು, ಸದರಿ ಆಸ್ಪತ್ರೆಯಲ್ಲಿ ಫರಾನ್, ಸಿಮ್ರು ಮತ್ತು ಸುಹೇಲ್ ಇದ್ದರು, ಫರಾನ ಎಡಗೈ ಹೆಬ್ಬೆರಳು ಕಟ್ಟಾಗಿತ್ತು, ಅಲ್ಲಿ ವೈದ್ಯರು ಬೇಗ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದರು, ಅದರಂತೆ ವಿಕ್ಟೋರಿಯಾ ಆಸ್ಪತ್ರೆಗೆ ಫರಾನ್‌ನನ್ನು ಅಂಬ್ಯುಲೆನ್ಸನಲ್ಲಿ ನಮ್ಮ ಮಾವನೊಂದಿಗೆ ಕಳುಹಿಸಿಕೊಟ್ಟೆವು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ** :

**ಪ್ರಶ್ನೆ - 15** **:** ಪ್ರಾಸಾ.*5* - ಲಿಯಾಕತ್‌ರವರು ತಮ್ಮ ಸಾಕ್ಷ್ಯದಲ್ಲಿ ತಾ:*21.01.2020* ರಂದು ಆಲ್ ಅಮಿನ್ ಶಾಲೆಯ ರಸ್ತೆಯಲ್ಲಿ ಪೊಲೀಸರು ಬಂದು ಮಹಜರ ಮಾಡಿದರು, ಪೊಲೀಸರು ಸ್ಥಳದಲ್ಲಿ ಬಿದ್ದಿದ್ದ ಎಂ.ಒ.*2* - ರಕ್ತವಾಗಿದ್ದ ಮಣ್ಣು ಹಾಗೂ ಎಂ.ಒ.*1* - ಬೇರೆ ಮಣ್ಣನ್ನು ಡಬ್ಬಿಯಲ್ಲಿ ಸಂಗ್ರಹಿಸಿ, ನಾನು ಅಲ್ಲಿ ಇದ್ದ ಬಗ್ಗೆ ನನ್ನ ಸಹಿ ಪಡೆದರು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ** :

**ಪ್ರಶ್ನೆ - 16** **:** ಪ್ರಾಸಾ.*6* - ಫರೀದ್ ಖಾನ್‌ರವರು ತಮ್ಮ ಸಾಕ್ಷ್ಯದಲ್ಲಿ ತಾ:*21.01.2020* ರಂದು ಮಧ್ಯಾಹ್ನ *1.30* ರ ಸಮಯದಲ್ಲಿ ಚನ್ನಪಟ್ಟಣ ಆಲ್ ಅಮಿನ್ ಶಾಲೆಯ ರಸ್ತೆಯಲ್ಲಿ ಗಲಾಟೆಯಾಗಿತ್ತು ಎಂದು ಪೊಲೀಸರು ಬಂದು ಮಹಜರ ಮಾಡಿದರು, ಗಲಾಟೆಯಾದ ಸ್ಥಳವನ್ನು ಸಿಮ್ರಾನ್ ತೋರಿಸಿದರು, ಪೊಲೀಸರು ಸ್ಥಳದಲ್ಲಿ ನಿಪಿ.*2* - ಮಹಜರ ಮಾಡಿ ಅಲ್ಲಿ ಬಿದ್ದಿದ್ದ ಎಂ.ಒ.*2* - ರಕ್ತವಾಗಿದ್ದ ಮಣ್ಣು ಹಾಗು ಎಂ.ಒ.*1* - ಬೇರೆ ಮಣ್ಣನ್ನು ತೆಗೆದುಕೊಂಡರು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ** :

<u>**ಪ್ರಶ್ನೆ - 17**</u> **:** ಪ್ರಾಸಾ.*7* – ಅರೇಂದ್ರೇಗೌಡಸ, ನಿವೃತ್ತ ಎಎಸ್ಐ ರವರು ತಮ್ಮ ಸಾಕ್ಷ್ಯದಲ್ಲಿ ತಾಃ ***21.01.2020*** ರಂದು ಈ ಪ್ರಕರಣದ ಆರೋಪಿ - ಸೈಯದ್ ಜಬೀರ್‌ನನ್ನು ದಸ್ತಗಿರಿ ಮಾಡಲು ಪಿಎಸ್ಐರವರು ನನ್ನನ್ನು ಹಾಗು ಪೇದೆ ***319*** ಹಾಗು ಪೇದೆ ***775*** ರವರನ್ನು ನೇಮಿಸಿದ್ದರು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

<u>**ಉತ್ತರ**</u> :

<u>**ಪ್ರಶ್ನೆ - 18**</u> **:** ಪ್ರಾಸಾ.*7* ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಅದರಂತೆ ನಾವು ಚನ್ನಪಟ್ಟಣದ ಮೆಹದಿ ನಗರಕ್ಕೆ ಹೋಗಿ ಆರೋಪಿಯ ಬಗ್ಗೆ ವಿಚಾರಿಸಿದಾಗ ಆರೋಪಿ ಕೆಂಗೇರಿಯ ಬಳಿ ವಾಸವಿರುವ ಬಗ್ಗೆ ಗೊತ್ತಾಯಿತು, ನಾವು ಕೆಂಗೇರಿಯ ಬಾಬಾಸಾಹೇಬ್ರು ಪಾಳ್ಯಕ್ಕೆ ಹೋಗಿ ವಿಚಾರಿಸಿದಾಗ ಆರೋಪಿ ವಾಸವಿದ್ದ ಸ್ಥಳ ತಿಳಿದು ಬಂದ ಮೇರೆಗೆ ಅಲ್ಲಿಗೆ ಬೆಳಿಗ್ಗೆ ***11*** ಗಂಟೆಗೆ ಹೋಗಿ ಅಲ್ಲಿದ್ದ ಆರೋಪಿಯನ್ನು ವಶಕ್ಕೆ ಪಡೆದು, ಮಧ್ಯಾಹ್ನ ***12.30*** ಕ್ಕೆ ಠಾಣೆಗೆ ಕರೆ ತಂದು ಪಿಎಸ್ಐರವರ ಮುಂದೆ ಹಾಜರುಪಡಿಸಿ ನಿಪಿ.*3* - ವರದಿ ನೀಡಿರುತ್ತೇನೆ, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

<u>**ಉತ್ತರ**</u> :

<u>**ಪ್ರಶ್ನೆ - 19**</u> **:** ಪ್ರಾಸಾ.*8* – ಜಿಮ್ರಾನ್ ಖಾನ್ ಮತ್ತು ಪ್ರಾಸಾ.*9* - ಇರ್ಫಾನ್ ಬೇಗ್‌ರವರು ತಮ್ಮ ಸಾಕ್ಷ್ಯದಲ್ಲಿ ಒಂದೂವರೆ ವರ್ಷದ ಹಿಂದೆ ಚನ್ನಪಟ್ಟಣ ಪೊಲೀಸ್ ಠಾಣೆಗೆ ನಾವು ಇರ್ಫಾನ್‌ನೊಂದಿಗೆ ಹೋಗಿದ್ದೆವು, ಪೊಲೀಸರು ನಮ್ಮನ್ನು ಹಾಗೂ ಆರೋಪಿಯನ್ನು ಜೀಪಿನಲ್ಲಿ ಶೇರವ ಹೋಟೆಲ್ ಬಳಿ ಆಟೋ ನಿಲ್ದಾಣದ ಹತ್ತಿರ ಕರೆದುಕೊಂಡು ಹೋಗಿದ್ದು, ಅಲ್ಲಿ ಚರಂಡಿಯ ಬಳಿ ಇದ್ದ ಚಾಕುವನ್ನು ಆರೋಪಿ ತೆಗೆದುಕೊಟ್ಟಿದ್ದನ್ನು ಪೊಲೀಸರು ತೆಗೆದುಕೊಂಡರ, ಚಾಕುವಿಗೆ ರಕ್ತ ಹತ್ತಿತ್ತು, ಪೊಲೀಸರು ಅಲ್ಲಿ ನಮ್ಮ ಸಹಿ ಪಡೆದರು, ಸದರಿ ಚಾಕು ಮುರಿದಿತ್ತು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

<u>**ಉತ್ತರ**</u> :

<u>**ಪ್ರಶ್ನೆ - 20**</u> **:** ಪ್ರಾಸಾ.***8*** ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಪೊಲೀಸರು ಸದರಿ ಚಾಕುವನ್ನು ಬಟ್ಟೆಯಲ್ಲಿ ಸುತ್ತಿ ತೆಗೆದುಕೊಂಡು ಹೋದರು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

<u>**ಉತ್ತರ**</u> :

<u>**ಪ್ರಶ್ನೆ - 21**</u> **:** ಪ್ರಾಸಾ.***9*** – ಇರ್ಫಾನ್ ಬೇಗ್, ಒಂದೂವರೆ ವರ್ಷದ ಹಿಂದೆ ಚನ್ನಪಟ್ಟಣ ಪೊಲೀಸ್ ಠಾಣೆಗೆ ನಾನು ಮತ್ತು ನನ್ನ ತಮ್ಮ ಜಿಬ್ರಾನ್ ಹೋಗಿದ್ದೆವು, ಪೊಲೀಸರು ನಮ್ಮನ್ನು ಹಾಗು ಆರೋಪಿಯನ್ನು ಜೀಪಿನಲ್ಲಿ ಶೇರವ ಹೋಟೆಲ್ ಬಳಿ ಆಟೋ ನಿಲ್ದಾಣದ ಹಿಂಭಾಗದ ತೋಪಿನ ಬಳಿಯ ಮೋರಿಯ ಬಳಿ ಕರೆದುಕೊಂಡು ಹೋಗಿದ್ದು, ಅಲ್ಲಿ ಬಿದ್ದಿದ್ದ ಚಾಕುವನ್ನು ಆರೋಪಿ ತೆಗೆದುಕೊಟ್ಟಿದ್ದನ್ನು ಪೊಲೀಸರು ತೆಗೆದುಕೊಂಡರು, ಚಾಕುವಿಗೆ ರಕ್ತ ಹತ್ತಿತ್ತು, ಪೊಲೀಸರು ಅಲ್ಲಿ ನಮ್ಮ ಸಹಿ ಪಡೆದುಕೊಂಡರು, ಸದರಿ ಚಾಕು ಸ್ವಲ್ಪ ಮುರಿದಿತ್ತು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

<u>**ಉತ್ತರ**</u> :

<u>**ಪ್ರಶ್ನೆ - 22**</u> **:** ಪ್ರಾಸಾ.***10*** – ಜೋಸೆಪ್, ಪಿಎಸ್ಐ ರವರು ತಮ್ಮ ಸಾಕ್ಷ್ಯದಲ್ಲಿ ತಾಃ***21.01.2020*** ರಂದು ನಾನು ಠಾಣೆಯಲ್ಲಿದ್ದಾಗ ಪಿಎಸ್ಐ ಹರೀಶರವರು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರುವ ಫರಾನ್ ಮೆಹದಿ ರವರ ಹೇಳಿಕೆಯನ್ನು ಮಾಡಿಕೊಂಡು ಬನ್ನಿ ಎಂದು ಮೌಖಿಕವಾಗಿ ಹೇಳಿದ್ದರು, ಆದರಂತೆ ನಾನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳು ಫರಾನ್ ಮೆಹದಿರವರ ನಿಪಿ.***5*** - ಹೇಳಿಕೆಯನ್ನು ವೈದ್ಯರ ಸಮಕ್ಷಮ ದಾಖಲು ಮಾಡಿಕೊಂಡಿರುತ್ತೇನೆ, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

<u>**ಉತ್ತರ**</u> :

<u>**ಪ್ರಶ್ನೆ - 23**</u> **:** ಪ್ರಾಸಾ.***11*** – ಪ್ರಕಾಶ ಬಿ.ಕೆ., ಆರಕ್ಷಕ ನಿರೀಕ್ಷಕರುರವರು ತಮ್ಮ ತಾಃ***10.05.2020*** ರಂದು ಸಾಕ್ಷಿ - ಸುಹೇಲಾ ಖಾನ್ ಮತ್ತು ಮುಷಾಪಿರ್ ಇವರುಗಳ

ಹೇಳಿಕೆಗಳನ್ನು ಪಡೆದುಕೊಂಡೆನು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ** :

**ಪ್ರಶ್ನೆ - 24** **:** ಪ್ರಾಸಾ.*11* ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತಾಃ*03.06.2020* ರಂದು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯನ್ನು ಸ್ವೀಕರಿಸಿರುತ್ತೇನೆ, ತಾಃ *20.06.2020* ರಂದು ಗಾಯಾಳುವಿನ ಗಾಯದ ಪ್ರಮಾಣಪತ್ರವನ್ನು ಸ್ವೀಕರಿಸಿರುತ್ತೇನೆ, ಅದೇ ದಿನ ಸಾಕ್ಷಿ - ಜಬ್ರಾನ್ ಖಾನ್, ಇರ್ಫಾನ್ ಬೇಗ್ ಹಾಗೂ ಪೇದೆ - ಭೀಮರಾಯ್ ದಳವಾಯಿರವರ ಹೇಳಿಕೆಗಳನ್ನು ಪಡೆದಿರುತ್ತೇನೆ, ತನಿಖೆಯಿಂದ ಆರೋಪಿಯ ವಿರುದ್ಧ ಆರೋಪ ಕಂಡು ಬಂದಿದ್ದರಿಂದ ದೋಷರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ., ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ** :

**ಪ್ರಶ್ನೆ - 25** **:** ಪ್ರಾಸಾ.*12* – ಡಾ.ವೈ.ಶ್ರೀವಿದ್ಯಾ, ಹಿರಿಯ ವೈಜ್ಞಾನಿಕ ಅಧಿಕಾರಿರವರು ತಮ್ಮ ಸಾಕ್ಷ್ಯದಲ್ಲಿ ತಾಃ *24.02.2020* ರಂದು ಪಿಸಿ *640* – ಪ್ರವೀಣ್ ಕೆ ಇವರು ನಮ್ಮ ಕಚೇರಿಗೆ ಚನ್ನಪಟ್ಟಣ ಪೂರ್ವ ಪೊಲೀಸ್ ಠಾಣೆಯ ಕ್ರೈಂ *6/20* ಕ್ಕೆ ಸಂಬಂಧಪಟ್ಟ ಮೂರು ಸೀಲಾದ ವಸ್ತುಗಳನ್ನು ನಮ್ಮ ಕಚೇರಿಗೆ ತಂದು ಕೊಟ್ಟಿದ್ದರು, ಅದೇ ದಿನ ಸದರಿ ವಸ್ತುಗಳ ಪರೀಕ್ಷೆಯ ಜವಾಬ್ದಾರಿಯನ್ನು ನಮ್ಮ ಸಹಾಯಕ ನಿರೀಕ್ಷಕರು ನನಗೆ ವಹಿಸಿಕೊಟ್ಟರು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ** :

**ಪ್ರಶ್ನೆ - 26** **:** ಪ್ರಾಸಾ.*12* ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತಾಃ*04.05.2020* ರಂದು ಸದರಿ ವಸ್ತುಗಳನ್ನು ನೋಡಲಾಗಿ ಅವುಗಳು ಸೀಲಾಗಿದ್ದು, ಅವುಗಳ ಸೀಲು ಮಾದರಿ ಸೀಲಿಗೆ ಹೊಂದುತ್ತಿತ್ತು, ಸದರಿ ವಸ್ತುಗಳನ್ನು ತೆರೆದು ನೋಡಲಾಗಿ ಅವುಗಳ ಪೈಕಿ ವಸ್ತು ಸಂಖ್ಯೆ - *1.* ರಕ್ತವಾದ ಮಣ್ಣು, *2.* ಕಂಟ್ರೋಲ್ ಮಣ್ಣು,

*3.*ಒಂದು ಡ್ರಾಗರ್ ಆಗಿತ್ತು, ಮೇಲ್ಕಂಡ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ವಸ್ತು ಸಂಖ್ಯೆ *1* ಮತ್ತು *3* ರಲ್ಲಿ ರಕ್ತದ ಅಂಶ ಕಂಡು ಬಂದಿತು ಹಾಗೂ ಅದು ಮಾನವನ ರಕ್ತವಾಗಿತ್ತು, ವಸ್ತು ಸಂಖ್ಯೆ *2* ರಲ್ಲಿ ರಕ್ತದ ಅಂಶ ಕಂಡು ಬಂದಿರಲಿಲ್ಲ, ರಕ್ತದ ಅಂಶ ತುಂಬಾ ಕಡಿಮೆ ಇದ್ದುದರಿಂದ ರಕ್ತದ ಗುಂಪನ್ನು ಕಂಡು ಹಿಡಿಯಲು ಆಗಿರುವುದಿಲ್ಲ, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ** :

**ಪ್ರಶ್ನೆ - 27** : ಪ್ರಾಸಾ.*12* ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಪರೀಕ್ಷೆಯ ನಂತರ ಸದರಿ ವಸ್ತುಗಳನ್ನು ಸೀಲು ಮಾಡಿ ವರದಿಯನ್ನು ತಯಾರಿಸಿ, ಮೇಲಾಧಿಕಾರಿಯ ಮೂಲಕ ವರದಿಯನ್ನು ಮಾದರಿ ಸೀಲಿನೊಂದಿಗೆ ಸಂಬಂಧಪಟ್ಟ ಪೊಲೀಸರಿಗೆ ಕಳುಹಿಸಿಕೊಟ್ಟಿರುತ್ತೇನೆ, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ** :

**ಪ್ರಶ್ನೆ - 28** : ಪ್ರಾಸಾ.*15* – ಬಿ.ಸಿ.ಹರೀಶ, ಆರಕ್ಷಕ ನಿರೀಕ್ಷಕರುರವರು ತಮ್ಮ ಸಾಕ್ಷ್ಯದಲ್ಲಿ ತಾಃ ***21.01.2020*** ರಂದು ಆರೋಪಿಯ ಪತ್ತೆಗಾಗಿ ಚಾಸಾ.*9* ರಿಂದ *11* ರವರನ್ನು ನೇಮಿಸಿರುತ್ತೇನೆ, ಅದೇ ದಿನ ಬೆಳಿಗ್ಗೆ *11* ಗಂಟೆಗೆ ಆರೋಪಿಯನ್ನು ನನ್ನ ಮುಂದೆ ಹಾಜರುಪಡಿಸಿದರು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ** :

**ಪ್ರಶ್ನೆ - 29** : ಪ್ರಾಸಾ.*15* ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಚಾಸಾ.*5* ಮತ್ತು *6* ಇವರನ್ನು ಬರಮಾಡಿಕೊಂಡು ಕೃತ್ಯ ಸ್ಥಳದಲ್ಲಿ ಮಧ್ಯಾಹ್ನ *1.15* ರಿಂದ *2.00* ಗಂಟೆಯವರೆಗೆ ನಿಪಿ.*2* - ಮಹಜರ ಮಾಡಿ, ಸ್ಥಳದಲ್ಲಿದ್ದ ರಕ್ತ ಮಿಶ್ರಿತ ಮಣ್ಣು ಮತ್ತು ರಕ್ತಮಿಶ್ರಿತ ವಲ್ಲದ ಮಣ್ಣನ್ನು ಅಮಾನತ್ತುಪಡಿಸಿಕೊಂಡೆನು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ** :

**<u>ಪ್ರಶ್ನೆ - 30</u>** **:** ಪ್ರಾಸಾ.*15* ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಅದೇ ದಿನ ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡೆನು, ಆರೋಪಿ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಾನು ಕೃತ್ಯಕ್ಕೆ ಉಪಯೋಗಿಸಿದ ಡ್ರಾಗರನ್ನು ತನ್ನ ಜೊತೆಯಲ್ಲಿ ಬಂದರೆ ಹಾಜರುಪಡಿಸುತ್ತೇನೆಂದು ಹೇಳಿದರು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**<u>ಉತ್ತರ</u>** :

**<u>ಪ್ರಶ್ನೆ - 31</u>** **:** ಪ್ರಾಸಾ.*15* ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಅದೇ ದಿನ ಚಾಸಾ.*7* ಮತ್ತು *8* ರವರನ್ನು ಕೃತ್ಯ ಸ್ಥಳದಲ್ಲಿ ಕರೆಸಿ, ಅವರ ಸಮಕ್ಷಮ ಶೇರವ ಸರ್ಕಲ್‌ನ ಬಳಿಯಿರುವ ಸರ್ಕಾರಿ ತೋಪಿಗೆ ಆರೋಪಿ ನಮ್ಮನ್ನು ಕರೆದುಕೊಂಡು ಹೋಗಿ ಡ್ರಾಗರನ್ನು ತೋರಿಸಿದನು, ಅದನ್ನು ಮಧ್ಯಾಹ್ನ *2.30* ಗಂಟೆಯಿಂದ *3.15* ಗಂಟೆಯವರೆಗೆ ಮಹಜರ ಮಾಡಿ ವಶಪಡಿಸಿಕೊಂಡೆನು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**<u>ಉತ್ತರ</u>** :

**<u>ಪ್ರಶ್ನೆ - 32</u>** **:** ಪ್ರಾಸಾ.*15* ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಚಾಸಾ.*12* ಮತ್ತು *14* ರವರನ್ನು ಗಾಯಾಳುವಿನ ಹೇಳಿಕೆ ಪಡೆಯಲು ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಿಕೊಟ್ಟೆನು, ನಂತರ ಆರೋಪಿಯನ್ನು ನ್ಯಾಯಾಂಗ ಬಂಧನ ಕುರಿತು ನ್ಯಾಯಾಲಯಕ್ಕೆ ನನ್ನ ಸಿಬ್ಬಂದಿಗಳ ಮೂಲಕ ಹಾಜರುಪಡಿಸಿರುತ್ತೇನೆ, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**<u>ಉತ್ತರ</u>** :

**<u>ಪ್ರಶ್ನೆ - 33</u>** **:** ಪ್ರಾಸಾ.*15* ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತಾ:*12.02.2020* ರಂದು ಪಿರ್ಯಾದಿಯ ಮುಂದುವರೆದ ಹೇಳಿಕೆಯನ್ನು ಠಾಣೆಯಲ್ಲಿ ಪಡೆದುಕೊಂಡೆನು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**<u>ಉತ್ತರ</u>** :

**ಪ್ರಶ್ನೆ -** 34 **:** ಪ್ರಾಸಾ.***15*** ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತಾಃ***24.02.2020*** ರಂದು ವಶಪಡಿಸಿಕೊಂಡ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಎಫ್ ಎಸ್ ಎಲ್‌ಗೆ ಸಿಬ್ಬಂದಿಯಾದ ಚಾಸಾ.***13*** ರವರ ಮೂಲಕ ಕಳುಹಿಸಿಕೊಟ್ಟೆನು, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ** :

**ಪ್ರಶ್ನೆ -** 35 : ನಿಮಗೆ ಮತ್ತೇನಾದರೂ ಈ ಕೇಸಿನ ಬಗ್ಗೆ ಹೇಳುವುದಿದೆಯೆ?

**ಉತ್ತರ** :

**ಪ್ರಶ್ನೆ -** 36 : ಈ ಕೇಸಿನಲ್ಲಿ ನಿಮ್ಮ ಪರ ಯಾರಾದರೂ ಸಾಕ್ಷಿಗಳನ್ನು ವಿಚಾರಣೆ ಮಾಡಲು ಇಚ್ಛಿಸುತ್ತೀರಾ?

**ಉತ್ತರ** :

**(ಮೇಲ್ಕಂಡ ಆರೋಪಿಯ ಹೇಳಿಕೆಗಳು ತೆರೆದ ನ್ಯಾಯಾಲಯದಲ್ಲಿ ನನ್ನಿಂದ ಅಭಿಲೇಖಿಸಲ್ಪಟ್ಟಿದ್ದು ಅದರಲ್ಲಿ ಆರೋಪಿಯ ನಿಜವಾದ ಮತ್ತು ಸರಿಯಾದ ಹೇಳಿಕೆ ಅಡಗಿದೆಯೆಂದು ದೃಢೀಕರಿಸಿದೆ.)**

**ದಿನಾಂಕ :** 05.01.2023

*(ನಿಂಗಪ್ಪ ಪರಶುರಾಮ ಕೋಪರ್ಡೆ)*
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**